ಶ್ರೀ ಎ. ನಾಗರಾಜ್.—ಮಾನ್ಯ ಅಧ್ಯಕ್ಷರೇ, ೧೯೮೨-೮೩ನೇ ಇಸ್ವಿಯಲ್ಲಿ ಇಡೀ ಕೋಲಾರ ಜಿಲ್ಲೆ ಬರಗಾಲ ಪೀಡಿತ ಪ್ರದೇಶವಾಗಿತ್ತು. ಬಹುಶಃ ಯಾವ ಜಿಲ್ಲೆಯಲ್ಲೂ ೨೫ ಪೈಸೆ ಬೆಳೆಯಾಗಿರಲಿಲ್ಲ, ಹಾಗೆಯೇ ೧೯೮೩-೮೪ರಲ್ಲಿ ೩೫೫ ಹಳ್ಳಿಗಳಿಗೆ ೨೫ ಪೈಸೆಗಿಂತ ಹೆಚ್ಚಿಗೆ ಬೆಳೆಯಾಗಿರಲಿಲ್ಲ. ಕಾನೂನು ಪ್ರಕಾರವಾಗಿ ೨೫ ಪೈಸೆಗಿಂತ ಕಡಿಮೆ ಬೆಳೆಯಾಗಿರುವ ಹಳ್ಳಿಗಳಲ್ಲಿ ಕಂದಾಯವನ್ನು ಮಾಫಿ ಮಾಡಬೇಕು ಎನ್ನುವುದು ಇದೆ. ಆದರೆ ಕೆಲವು ಗ್ರಾಮ ಲೆಕ್ಕಿಗರು ಕೆಲವು ಹಳ್ಳಿಗಳಲ್ಲಿ ಕಂದಾಯ ಬಾಕಿ ಬಗ್ಗೆ ರೈತರಿಗೆ ಬಹಳ ಕಿರುಕುಳವನ್ನು ಕೊಡುತ್ತಿದ್ದಾರೆ ಇದರ ಬಗ್ಗೆ ಸರ್ಕಾರದವರು ತಕ್ಷಣವೇ ಆದೇಶ ಕಳುಹಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಕಾನೂನು ಪ್ರಕಾರವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

MR. DEPUTY SPEAKAR.—Question hour is over.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ ಪಟ್ಟಿ

ವಿಷಯ : ಭೂದಾನ ವಿದ್ಯಾದಾನಕ್ಕೆ ಸರ್ವೆ ನಂ. ೧೬, ತೆನೆಯೂರು ಗ್ರಾಮದ ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕಿನಲ್ಲಿ ಮಾಧ್ಯಮಿಕ ಶಾಲೆಗೆ, ಬೆಂಡಿಗಾನಹಳ್ಳಿ, ಸೂಲಿಬೆಲೆ ಹೋಬಳಿ, ಹೊಸಕೋಟೆ (ತಾಲ್ಲೂಕು ಬೆಂಗಳೂರು ಜಿಲ್ಲೆ, ಭೂದಾನ ಮಾಡಿದ ಬಗ್ಗೆ.)

೩೭೯. (೯೩೫) ಎನ್. ಚಿಕ್ಕೆಗೌಡ (ಹೊಸಕೋಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಮಂತ್ರಿಗಳು ದಯವಿಟ್ಟು ಉತ್ತರಿಸಿಬೇಕು ?

(ಅ) ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿ ತೆನೆಯೂರು ಗ್ರಾಮದ ಸರ್ವೆ ನಂ. ೧೬ರಲ್ಲಿ ೧೫ ಎಕರೆ ಜಮೀನನ್ನು ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕಿನಲ್ಲಿರುವ ಬೆಂಡಿಗಾನಹಳ್ಳಿ ಗ್ರಾಮದ ಸರ್ಕಾರಿ ಮಾಧ್ಯಮಿಕ ಶಾಲೆಗೆ ಶ್ರೀ ನಾರಾಯಣಗೌಡರು ದಿನಾಂಕ ೨೬ನೇ ಅಕ್ಟೋಬರ್ ೧೯೫೬ರಲ್ಲಿ ದಾನಪತ್ರ ಬರೆದಿರುವುದು ನಿಜವಲ್ಲವೇ,

(ಆ) ಹಾಗಿದ್ದಲ್ಲಿ, ಸದರೀ ಜಮೀನಿನ ಖಾತೆಯು ವಿದ್ಯಾಸಂಸ್ಥೆಯ ಹೆಸರಿಗೆ ವರ್ಗಾಯಿಸಿದೆಯೆ,

(ಇ) ಇದನಂತರ, ಪಾವತಿ ನಾರಾಯಣಗೌಡರ ವಾರಸುದಾರರು ಅದನ್ನು ಬೇರೆಯವರಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

(ಈ) ಹಾಗಿದ್ದಲ್ಲಿ, ಸರ್ಕಾರವು ಸದರೀ ವ್ಯವಹಾರವನ್ನು ರದ್ದು ಮಾಡಲು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

(ಅ) ಹೌದು.

(ಆ) ಹೌದು.

(ಇ) ಇಲ್ಲ.

(ಈ) ಉಪ ಪ್ರಶ್ನೆ (ಇ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ,